Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 925/2025

ಸಿ ಡಬ್ಲ್ಯೂ-2
ಪಿ ಡಬ್ಲ್ಯೂ-9

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಶರಣಬಸವ |
| ತಂದೆಯ ಹೆಸರು | ಃ- | ಹುಸೇನಪ್ಪ |
| ವಯಸ್ಸು | ಃ- | 35 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಕಸಬಾ-ಲಿಂಗಸುಗೂರು |

**ದಿ.06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ರವರ ಪರಿಚಯ ಇಲ್ಲ. ಚಾ.ಸಾ-3 ರವರ ಪರಿಚಯ ಇದೆ. ಸುಮಾರು ಒಂದು ವರ್ಷದ ಹಿಂದೆ ಪೋಲಿಸರು ಲಿಂಗಸುಗೂರು ಪೋಲಿಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೇ ನಿ.ಪಿ-4 ಮತ್ಉತ 5 ಎಂದು ಗುರುತಿಸಲಾಗಿದೆ. ನಮ್ಮ ಸಮಕ್ಷಮ ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಪೋಲಿಸರು ಹೇಳಿದ ಮೇರೆಗೆ ನಾನು ಪೋಟೋದಲ್ಲಿ ನಿಂತಿರುತ್ತೇನೆ ನಿ.ಪಿ-3 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದ**

ದಿನಾಂಕ 26-03-2025 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಪೋಲಿಸರು ಕರೆಯಿಸಿದ ಮೇರೆಗೆ ಚಾ.ಸಾ-1 ರವರು ತೊರಿಸಿದ ಸ್ಥಳದಲ್ಲಿ ಪೋಲಿಸರು

ಬೆಳಿಗ್ಗೆ 11-00 ರಿಂದ 12-00 ವರೆಗೆ ಪಂಚನಾಮೆ ಮಾಡಿ ಒಂದು ಕಪ್ಪ ಬಣ್ಣದ ಬೆಲ್ಟ್ ಮತ್ತು ಕಪ್ಪು ಬಣ್ಣದ ಬಲಗಾಲಿನ ಬೂಟನ್ನು ಜಪ್ತಿ ಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ-4 ಮತ್ತು 5 ರಂತೆ ಫೋಟೋ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-3 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎ.ಸಿ.ಪಿ ವಕೀಲರಿಂದಃ**

ಏನೂ ಇಲ್ಲ.

ಮರು ವಿಚಾರಣೆ ಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಪ್ರಧಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಅಂಗಸುಗೂರು.